ದಿನಾಂಕ : 15.07.2024
ಅಸಲು ದಾವೆ: 97/2020
ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಜೆ. ರವರಿಂದ :**

ನನ್ನ ದೊಡಮ್ಮನ ಗಂಡ ರಾಮಣ್ಣನ ಸಹೋದರರು 3 ಜನ ಇರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ರಾಮಣ್ಣನವರ ಅಣ್ಣ ನಿಂಗಯ್ಯ ಎನ್ನುವವರು ಒಬ್ಬರು ಇದ್ದಾರೆ ಎಂದರೆ ಸಾಕ್ಷಿ ನನಗೆ ಅವರ ಹೆಸರುಗಳ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ದೊಡ್ಡಮ್ಮನ ಗಂಡನ ಸಂಬಂಧಿಕರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಮ್ಮನ ಗಂಡನ ಸಂಬಂಧಿಕರ ಬಗ್ಗೆ ಗೊತ್ತಿದ್ದರೂ ಸಹಾ ಸತ್ಯ ಹೊರಬರುತ್ತದೆ ಎಂಬ ಕಾರಣಕ್ಕೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ರಾಮಣ್ಣನವರ ಸಹೋದರರು ಮತ್ತು ಸಂಬಂಧಿಕರ ಬಗ್ಗೆ ನಿಮ್ಮ ತಾಯಿ ಅಥವಾ ದೊಡ್ಡಮ್ಮನವರಿಂದ ಕೇಳಿ ತಿಳಿದುಕೊಳ್ಳಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಅದನ್ನು ತಿಳಿದುಕೊಳ್ಳುವ ಅವಶ್ಯಕತೆ ಇಲ್ಲ ಎಂದು ಉತ್ತರಿಸುತ್ತಾರೆ.

ನಿಮ್ಮ ದೊಡಪ್ಪ ಸರೋಜಮ್ಮನವರ ವಾರಗಿತಿ ಸಣ್ಣಮ್ಮನವರ ಗಂಡ ಯಾರೆಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಸಣ್ಣಮ್ಮ 1 ನೇ ಪ್ರತಿವಾದಿಯ ಹೆಂಡತಿ ಭಾಗ್ಯಮ್ಮನಿಗೆ ಚಿಕ್ಕಮ್ಮನಾಗಬೇಕು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಚೌಡಮ್ಮ, ಕುಳ್ಳಮ್ಮ ಮತ್ತು ಸಣ್ಣಮ್ಮ ಈ ಮೂರು ಜನ ಸಹೋದರಿಯರ ಬಗ್ಗೆ ನೀವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಅತ್ತೆ ಭಾಗ್ಯಮ್ಮನವರ ತಾಯಿಯ ಹೆಸರು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸುಮಾರು 5 ವರ್ಷಗಳ ಹಿಂದೆ ಭಾಗಮ್ಮರವರ ತಾಯಿ ತೀರಿಕೊಂಡಿರುತ್ತಾರೆ. ಸದರಿ ಭಾಗ್ಯಮ್ಮನವರ ತಾಯಿ ಕರಡಕೆರೆ ಗ್ರಾಮದಲ್ಲಿಯೇ ತೀರಿಕೊಂಡಿರುತ್ತಾರೆ, ಅವರ

ಅಂತ್ಯಕ್ರಿಯೆಯನ್ನು ಅಲ್ಲಿಯೇ ಮಾಡಲಾಗಿರುತ್ತದೆ. ಆ ಅಂತ್ಯಕ್ರಿಯೆಗೆ ನಾನು ಹೋಗಿರುವುದಿಲ್ಲ, ಆ ಸಮಯದಲ್ಲಿ ನಾನು 12 ದಿನಗಳ ಬಾಣಂತಿಯಾಗಿದ್ದೆ.

ಭಾಗ್ಯಮ್ಮನ ಒಡಹುಟ್ಟಿದವರು ಗೊತ್ತಾ ಎಂದರೆ ಸಾಕ್ಷಿ ಭಾಗ್ಯಮ್ಮನವರನ್ನು ಸೇರಿಸಿ ಒಟ್ಟು 4 ಜನ, ಒಬ್ಬ ಗಂಡು ಮಗ, 3 ಜನ ಹೆಣ್ಣು ಮಕ್ಕಳು. ಭಾಗ್ಯಮ್ಮನ ತಮ್ಮನ ಹೆಸರು ಶಿವಲಿಂಗು, ಅವರ ಇಬ್ಬರ ಸಹೋದರಿಯರ ಹೆಸರು ನನಗೆ ಗೊತ್ತಿಲ್ಲ. ಭಾಗ್ಯಮ್ಮನ ಇಬ್ಬರು ಸಹೋದರಿಯರು ಇದ್ದಾರೆ. ಒಬ್ಬರು ಕರಡಕರೆಯಲ್ಲಿಯೇ ಇದ್ದಾರೆ, ಇನ್ನೊಬ್ಬರು ತಿಟ್ಟಮಾರನಹಳ್ಳಿಯಲ್ಲಿ ಇದ್ದಾರೆ, ಅವರ ತಮ್ಮ ಕರಡಕರೆಯಲ್ಲಿಯೇ ಇದ್ದಾರೆ.

ಸಣ್ಣಮ್ಮ ಮತ್ತು ಲಿಂಗಯ್ಯ ದಂಪತಿಗಳಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸದರಿಯವರಿಗೆ ಒಟ್ಟು 4 ಗಂಡು ಒಂದು ಹೆಣ್ಣು ಮಗಳು ಇದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅವರ ಗಂಡು ಮಕ್ಕಳು ರವಿ, ರಮೇಶ, ಉಮೇಶ, ಮಹೇಶ ಮತ್ತು ಮಗಳು ಸುವಿತ್ರ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದವರು ನಿಮ್ಮ ದೊಡ್ಡಮ್ಮ ಸರೋಜಮ್ಮನವರ ವಾರಗಿತ್ತಿ ಸಣ್ಣಮ್ಮನ ಮಕ್ಕಳು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ದೊಡ್ಡಮ್ಮ ಸರೋಜಮ್ಮ ಇಬ್ಬರು ಚೆನ್ನಾಗಿದ್ದೇವೆ. ನನ್ನ ದೊಡ್ಡಮ್ಮನ ಮಕ್ಕಳ ಹೆಸರು ರವಿ, ರಾಮಚಂದ್ರ ಮತ್ತು ನಾಗಮಣಿ. ನನ್ನ ದೊಡ್ಡಮ್ಮ ದೇವಿಪುರದಲ್ಲಿ ವಾಸವಿರುವುದು ಎಂದರೆ ಸರಿ. ನಿಮಗೆ ನಿಮ್ಮ ದೊಡ್ಡಮ್ಮನ ವಾರಗಿತ್ತಿ ಯಾರು ಎಂಬುದು, ಸಣ್ಣಮ್ಮನವರು ಭಾಗ್ಯಮ್ಮನ ಚಿಕ್ಕಮ್ಮ ಎಂಬುದು ನಿಮಗೆ ಗೊತ್ತಿದ್ದರೂ ಸಹಾ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಮತ್ತು ಭಾಗ್ಯಮ್ಮ ದೊಡ್ಡಮ್ಮ ಚಿಕ್ಕಮ್ಮನ ಮಕ್ಕಳಾಗಿದ್ದು , ಅಕ್ಕ ತಂಗಿಯರಾಗಬೇಕು ಎಂಬ ವಿಚಾರ ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ ನೀವು ನ್ಯಾಯಾಲಯದಲ್ಲಿ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಭಾಗ್ಯಮ್ಮನವರ ಮಗ ಕೆ.ಟಿ.ಪುನೀತ್ ರವರು ನಿಮಗೆ ಮಗನಾಗಬೇಕು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಕಾರ ಕೆ.ಟಿ.ಪುನೀತ್ ಏನಾಗಬೇಕು ಎಂದರೆ ಸಾಕ್ಷಿ ಗಂಡನಾಗಬೇಕು ಎಂದು ಉತ್ತರಿಸುತ್ತಾರೆ.

ಈ ಕೇಸಿನಲ್ಲಿ ನಾನು ಪಾರ್ಟಿಯಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಲೋಹಿತ್ ಗೌಡರವರ ಮೈನರ್ ಗಾರ್ಡಿಯನ್ ಆಗಿ ಈ ದಾವೆ ಹೂಡಿದ್ದೀರಿ ಎಂದರೆ

ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಭಾಗ್ಯಮ್ಮರವರ ಮಗ ಪುನೀತ್ ಕೆ.ಟಿ.ಯವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಪುನೀತ್ ಕೆ.ಟಿ.ಯವರಿಗೆ ನೀವು ಚಿಕ್ಕಮ್ಮ ಆಗಬೇಕಾಗುತ್ತದೆ ಎಂಬ ವಿಚಾರ ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿಯೇ ಈ ದಾವೆಯಲ್ಲಿ ನೀವು ಪಾರ್ಟಿಯಾಗಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ನನ್ನ ಅತ್ತೆ ಮಾವನಿಗೆ 3 ಜನ ಮಕ್ಕಳು. ಪುಟ್ಟಸ್ವಾಮಿ, ಪುನೀತ್ ಮತ್ತು ವೆಂಕಟೇಶ್. ವೆಂಕಟೇಶ್ ರವರು ತೀರಿಹೋಗಿದ್ದಾರೆ ಎಂದರೆ ಸರಿ. ಸದರಿ ವೆಂಕಟೇಶ್ ರವರು ನನ್ನ ಮದುವೆಗೂ ಮುಂಚೆ ತೀರಿಕೊಂಡಿದ್ದಾರೆ, ಯಾವಾಗ ಎಂದು ನನಗೆ ಗೊತ್ತಿಲ್ಲ. ನಿಮ್ಮ ವಾದ ಪತ್ರದಲ್ಲಿ ಆಗಲಿ, ಪ್ರಮಾಣ ಪತ್ರದಲ್ಲಿ ಆಗಲಿ ವೆಂಕಟೇಶ್ ರವರ ಬಗ್ಗೆ ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ವೆಂಕಟೇಶ್ ರವರು ತೀರಿಕೊಂಡಾಗ ಅವರಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ವೆಂಕಟೇಶ್ ರವರು ಯಾವ ಕಾರಣಕ್ಕೆ ತೀರಿಕೊಂಡರು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಅವರು ಅಂಗವಿಕಲರಾಗಿದ್ದರು, ಕೂತಲ್ಲಿಯೇ ಕುಳಿತುಕೊಳ್ಳುತ್ತಿದ್ದರು, ಹಾಗಾಗಿ ಆರೋಗ್ಯದ ಸಮಸ್ಯೆ ಉಂಟಾಗಿ ತೀರಿಕೊಂಡಿರುತ್ತಾರೆ ಎಂದು ನನ್ನ ಗಂಡ ನನಗೆ ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ. ಅವರಿಗೆ ಯಾವ ರೀತಿ ಅಂಗವಿಕಲತೆ ಇತ್ತು ಎಂದು ಹೇಳಬಹುದಾ ಎಂದರೆ ಸಾಕ್ಷಿ ಅವರ ಅನುವಂಶಿಕವಾಗಿಯೇ ಬಂದ ಖಾಯಿಲೆ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ಅವರ ಅನುವಂಶೀಯವಾಗಿ ಬಂದ ಖಾಯಿಲೆ ಯಾವುದು ಎಂದು ಹೇಳಲು ಆಗುವುದಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿಯ ಮಗ ವೆಂಕಟೇಶ್ 16 ನೇ ವಯಸ್ಸಿನಲ್ಲಿಯೇ ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವೆಂಕಟೇಶ್ ರವರು ಹುಟ್ಟುವಾಗಲೇ ಹೃದಯ ಸಂಬಂಧಿ ಖಾಯಿಲೆ ಮತ್ತು ಅನುವಂಶೀಯವಾಗಿ muscular dystrophiya ಎಂಬ ಖಾಯಿಲೆ ಇಂದ ತೀರಿಕೂಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವೆಂಕಟೇಶ್ ರವರ ಖಾಯಿಲೆ ಚಿಕಿತ್ಸೆಗಾಗಿ ಮಾಡಿದ ಖರ್ಚುಗಳ ಬಗ್ಗೆ ಮತ್ತು ಪಡೆದುಕೊಂಡಿರುವ ಚಿಕಿತ್ಸೆ ಬಗ್ಗೆ ನನಗೇನು ಗೊತ್ತಿಲ್ಲ. ಪ್ರತಿವಾದಿ 2 ಮತ್ತು 3 ರವರ ವೆಂಕಟೇಶ್ ರವರ ಚಿಕಿತ್ಸೆಗಾಗಿ ಸುಮಾರು 15 ರಿಂದ 18 ಲಕ್ಷಗಳನ್ನು ಸಾಲ ಮಾಡಿ ಖರ್ಚು ಮಾಡಿದರೂ ಸಹಾ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದರೆ ಸಾಕ್ಷಿ ನನ್ನ ಮದುವೆಗೂ ಮುಂಚಿನ ವಿಚಾರ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವೆಂಕಟೇಶ್ ರವರ ದಿನಾಂಕ

20.07.2009 ರಂದು ಅವಿವಾಹಿತರಾಗಿ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವೆಂಕಟೇಶ್ ರವರ ತನ್ನ ತಾಯಿಯನ್ನು ಅವರ ಕಾನೂನು ಬದ್ದ ವಾರಾಸುದಾರಾಗಿ ಬಿಟ್ಟು ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವೆಂಕಟೇಶ್ ರವರ ಭಾಗ ಭಾಗ್ಯಮ್ಮರವರಿಗೆ ಹೋಗುತ್ತದೆ ಎಂಬ ಕಾರಣಕ್ಕಾಗಿ ನೀವು ಪ್ರಾರಂಭದಲ್ಲಿ ಭಾಗ್ಯಮರವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ವೆಂಕಟೇಶ್ ರವರ ಅನಾರೋಗ್ಯದ ಚಿಕಿತ್ಸೆಯ ಬಾಬ್ತು ಮಾಡಿದ ಸಾಲ, ವಾದಿಯ ತಂದೆ ಕೆ.ಟಿ.ಪುನೀತ್ ರವರ ಚಿಕಿತ್ಸೆಗಾಗಿ ಮಾಡಿರುವ ಸಾಲ ಹಾಗೂ ಪ್ರಸ್ತುತ ಕುಟುಂಬದ ನಿರ್ವಹಣೆಗಾಗಿ ಮಾಡಿರುವ ಸಾಲಗಳ ಸಹಿತ ದಾವಾ ಸ್ವತ್ತುಗಳಲ್ಲಿ ವಾದಿಯ ಭಾಗ ಕೊಡಲು ಪ್ರತಿವಾದಿಯರು ತಯಾರಿದ್ದಾರೆ ಎಂದರೆ ಸಾಕ್ಷಿ ಸಾಲಗಳು ಇದೆ ಎಂದು ನನಗೆ ಹೇಳಿಲ್ಲ ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ಕುಟುಬದ ಋಣ ಸೇರಿ ದಾವಾ ಸ್ವತ್ತುಗಳಲ್ಲಿ 4 ನೇ ಒಂದು ಭಾಗ ವಾದಿಯ ಭಾಗವಾಗಿ ಕೊಡಲು ಪ್ರತಿವಾದಿಯರು ತಯಾರಿದ್ದಾರೆ ಎಂದರೆ ಸಾಕ್ಷಿ ನನಗೆ ಒಪ್ಪಿಗೆ ಇಲ್ಲ ಎಂದು ಉತ್ತರಿಸುತ್ತಾರೆ. ನಾನು ಈ ದಾವೆಯನ್ನು ನನ್ನ ಮಗನ ಭಾಗಾಂಶವನ್ನು ಕೋರಿ ಸಲ್ಲಿಸಿರುತ್ತೇನೆ ಎಂದರೆ ಸರಿ. ದಾಖಲೆ ರೂಪದಲ್ಲಿ ಇರುವ ಸಾಲಗಳನ್ನಾದರೂ ನೀವು ತೀರಿಸಲು ಅಥವಾ ಹಂಚಿಕೆ ಮಾಡಿಕೊಳ್ಳಲು ಒಪ್ಪುತೀರಾ ಎಂದರೆ ಸಾಕ್ಷಿ ನನ್ನ ಗಂಡ ಯಾವುದೇ ಸಾಲ ಮಾಡಿರುವ ಬಗ್ಗೆ ನನಗೆ ಹೇಳಿಲ್ಲ ಎಂದು ಉತ್ತರಿಸುತ್ತಾರೆ.

ತಿಮ್ಮೇಗೌಡರ ಜೊತೆ ಹುಟ್ಟಿದವರು 4 ಜನರು ಅವರೆಂದರೆ ಬೋರೆಗೌಡ, ತಿಮ್ಮೇಗೌಡ, ಸಿದ್ದೇಗೌಡ ಮತ್ತು ಬೋರ . ಈ 4 ಜನ ವಿಭಾಗ ಆಗಿರುವ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿ. ಯಾವ ರೀತಿಯಲ್ಲಿ ಭಾಗ ಆಗಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಎಷ್ಟು ವರ್ಷಗಳ ಹಿಂದೆ ಈ 4 ಜನರು ವಿಭಾಗ ಮಾಡಿಕೊಂಡಿದ್ದಾರೆ ಎಂದು ನನಗ ಗೊತ್ತಿಲ್ಲ. ಈ 4 ಜನರು ಮಾಡಿಕೊಂಡ ವಿಭಾಗದಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ಆಸ್ತಿಗಳು ಭಾಗಕ್ಕೆ ಬಂದವು ಎಂದು ನನಗೆ ಹೇಳಲು ಆಗುವುದಿಲ್ಲ. ಅವರು ಹೇಗೆ ಭಾಗ ಮಾಡಿಕೊಂಡಿದ್ದಾರೆ ಎಂಬ ವಿಚಾರವನ್ನು ನೀವು ಹೇಳುತ್ತಿಲ್ಲ, ಆ ಸಂಬಂಧ ದಾಖಲಾತಿಗಳನ್ನು ನೀವು ನೋಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸುಮಾರು 25 ವರ್ಷಗಳ ಹಿಂದೆ ಮೇಲೆ ಹೇಳಿದ 4 ಜನ ಸಹೋದರರು ನೊಂದಾಯಿತ ವಿಭಾಗ ಪತ್ರದ ಮೂಲಕ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ವಿಭಾಗ

ಮಾಡಿಕೊಂಡ ನಂತರ 2 ನೇ ಪ್ರತಿವಾದಿ ಪುಟ್ಟಸ್ವಾಮಿರವರು ದುಡಿಯಲು ಪ್ರಾರಂಭಿಸಿದ ಮೇಲೆ ಕೆ.ಎಂ.ದೊಡ್ಡಿಯಲ್ಲಿರುವ ವಾಣಿಜ್ಯ ಮಳಿಗೆಗಳನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ವಾಸವಿರುವ ಮನೆಯನ್ನು ಸಹಾ ಪುಟ್ಟಸ್ವಾಮಿರವ ಸಹಾಯದಿಂದಲೇ ಕಟ್ಟಿರುವುದು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ವಾಸದ ಮನೆ ಮತ್ತು ವಾಣಿಜ್ಯ ಮಳಿಗೆಗಳು ಪುಟ್ಟಸ್ವಾಮಿಯವರ ಸ್ವಂತ ಆದಾಯದ ಮೂಲದಿಂದ ಕಟ್ಟಿರುವುದು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಸದರಿ ಮನೆ ಮತ್ತು ವಾಣಿಜ್ಯ ಮಳಿಗೆಗಳನ್ನು ಇತ್ತೀಚೆಗೆ ಅಂದರೆ 12 – 13 ವರ್ಷಗಳಿಂದ ಈಚೆಗೆ ಕಟ್ಟಿರುವುದು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಸದರಿ ಮನೆ ಮತ್ತು ವಾಣಿಜ್ಯ ಮಳಿಗೆಗಳ ಮೇಲೆ ಕೆ.ಟಿ.ಪುನೀತ್ ರವರಿಗೆ ಅಗಲಿ, ಕೆ.ಟಿ.ವೆಂಕಟೇಶ್ ರವರಿಗೆ ಆಗಲಿ , 3 ನೇ ಪ್ರತಿವಾದಿಗೆ ಆಗಲಿ ಯಾವುದೇ ಭಾಗಂಶದ ಹಕ್ಕು ಇಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಅವಿದ್ಯಾವಂತರು ಎಂದರೆ ಸರಿ. ಅವರಿಗೆ ಲೋಕಜ್ಞಾನವಾಗಲಿ, ವ್ಯಾವಹಾರಿಕ ಜ್ಞಾನವಾಗಲಿ ಇಲ್ಲ ಎಂದರೆ ಸಾಕ್ಷಿ ಇದೆ ಅವರೇ ಮಾಡುವುದು ಎಂದು ಉತ್ತರಿಸುತ್ತಾರೆ. ಹಾಗಾಗಿ 3 ನೇ ಪ್ರತಿವಾದಿ ಭಾಗ್ಯಮ್ಮರವರು 2 ನೇ ಪ್ರತಿವಾದಿಯ ಸಹಾಯದಿಂದ ಕಾಲದಿಂದಲೂ ಕುಟುಂಬ ನಿರ್ವಹಣೆಯನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಹಾಗಾಗಿ 3 ನೇಪ್ರತಿವಾದಿ ಭಾಗ್ಯಮ್ಮರವರೇ ಕುಟುಂಬ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಭಾಗ್ಯಮ್ಮರವರೇ ಕುಟುಂಬದ ಯಜಮಾನರು, ನೀವು ವಾದ ಪತ್ರದಲ್ಲಿ ಹೇಳಿರುವ ರೀತಿ 1 ನೇ ಪ್ರತಿವಾದಿ ಕುಟುಂಬದ ಯಜಮಾನರಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

1 ನೇ ಪ್ರತಿವಾದಿ ಅವಿದ್ಯಾವಂತರು ಮತ್ತು ಲೋಕಜ್ಞಾನ ಹಾಗೂ ವ್ಯಾವಹಾರಿಕ ಜ್ಞಾನ ಇಲ್ಲದೆ ಇದ್ದ ಕಾರಣ 2 ನೇ ಪ್ರತಿವಾದಿ ತಮ್ಮ ತಾಯಿ ಮಾರ್ಗದರ್ಶನದಂತ ಚಿಕ್ಕವಯಸ್ಸಿನಲ್ಲಿಯೇ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಕುಟುಂಬ ನಿರ್ವಹಣೆಯ ಜವಬ್ದಾರಿ ಆರಂಭದಿಂದಲೂ 2 ನೇ ಪ್ರತಿವಾದಿಯ ಮೇಲೆ ಇತ್ತು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಸಹಾಯದಿಂದಲೇ ಅವರ ಸಹೋದರರಾದ ಪುನೀತ್ ಕೆ.ಟಿ. ಹಾಗೂ ವೆಂಕಟೇಶ್ ರವರ ವಿದ್ಯಾಭ್ಯಾಸವನ್ನು ಮಾಡಿದ್ದರು ಎಂದರೆ ಸಾಕ್ಷಿ ಸುಳ್ಳು ಅವರ ತಂದೆಯ ದುಡಿಮೆಯಿಂದ ಎಂದು ಉತ್ತರಿಸುತ್ತಾರೆ. ಕುಟುಂಬದ ಜವಬ್ದಾರಿಯ ನಿರ್ವಹಣೆಗಾಗಿಯೇ 2 ನೇ ಪ್ರತಿವಾದಿ ತನ್ನ

ಪಿ.ಯು.ಸಿ ವಿದ್ಯಾಭ್ಯಾಸವನ್ನು ಒಂದು ವರ್ಷ ಮಾಡಲು ಆಗಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಕುಟುಂಬದ ನಿರ್ವಹಣೆಯ ಸಲುವಾಗಿಯೇ ಸಕ್ಕರೆ ಕಾರ್ಖಾನೆ ಮತ್ತು ದಿನಸಿ ಅಂಗಡಿಯಲ್ಲಿ ದಿನಗೂಲಿ ನೌಕರರಾಗಿ ತಮ್ಮ ವಿದ್ಯಾಭ್ಯಾಸವನ್ನು ತಾತ್ಕಲಿಕವಾಗಿ ಸ್ಥಗಿತಗೊಳಿಸಿ ಕೆಲಸ ಮಾಡಿದ್ದರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿಯ ಶ್ರಮದ ಫಲದಿಂದ ಅವರ ಕುಟುಂಬದ ಸ್ಥಿತಿಗತಿ ಸುಧಾರಿಸಿ ಈಗಿನ ಕುಟುಂಬದ ಈಗಿನ ಗೌರವವನ್ನು ಉಳಿಸಿಕೊಳ್ಳಲು ಕಾರಣವಾಗಿದೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಇಷ್ಟೆಲ್ಲಾ ಜವಬ್ದಾರಿಯಿಂದ ಕುಟುಂಬ ನಿರ್ವಹಣೆ ನಿಭಾಯಿಸಿಯೂ ಸಹಾ 2 ನೇ ಪ್ರತಿವಾದಿ ತಮ್ಮ ವಿಧ್ಯಾಭ್ಯಾಸ ಮುಂದುವರೆಸಿ ಸಹೋದರರ ರೀತಿಯೇ ಪಧವಿದರರಾಗಿದ್ದಾರೆ ಎಂದರೆ ಸಾಕ್ಷಿ  ಇವರೊಬ್ಬರೇ ಪಧವಿದರರಾಗಿರುವುದು, ಅವರಿಬ್ಬರು ಪಧವಿದರರಲ್ಲ ಎಂದು ಉತ್ತರಿಸುತ್ತಾರೆ. ಬಿ.ಟಿ.ವೆಂಕಟೇಶ್ ರವರ ಅನಾರೋಗ್ಯದ ಚಿಕಿತ್ಸೆಗಾಗಿ ಮಾಡಿದ ಸಾಲವನ್ನು ತೀರಿಸಿರುವುದು 2 ನೇ ಪ್ರತಿವಾದಿ ಪುಟ್ಟಸ್ವಾಮಿಯವರ ಶ್ರಮದ ಫಲ ಎಂದರ  ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿರವರು ತಮ್ಮ ಇಬ್ಬರು ತಮ್ಮಂದಿರ ಮೇಲೆ ಅಧಮ್ಯವಾದ ಪ್ರೀತಿ ಇಟ್ಟುಕೊಂಡಿದ್ದರ ಫಲವಾಗಿ ಅವರ ಚಿಕಿತ್ಸೆಗಾಗಿ ಸಾಲ ಮಾಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ವೆಂಕಟೇಶ್ ರವರ ಚಿಕಿತ್ಸೆ ಸಮಯದಲ್ಲಿ 1 ನೇ ಪ್ರತಿವಾದಿ ರವರ ಕುಟುಂಬದ ಸ್ವತ್ತಿನಿಂದ ಯಾವುದೇ ಆದಾಯ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಅವಿದ್ಯಾವಂತರಾದ ಕಾರಣ ಮೇಲೆ ಹೇಳಿದ ಎಲ್ಲಾ ಜವಬ್ದಾರಿಯನ್ನು 2 ನೇ ಪ್ರತಿವಾದಿಯೇ ನಿಭಾಯಿಸಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿಯೇ ಕುಟುಬಂದ ಎಲ್ಲಾ ಖರ್ಚು ವೆಚ್ಚಗಳನ್ನು ಭರಿಸುತ್ತಾ ಬಂದಿದ್ದು, ಈಗಲೂ ಅವರೇ ಭರಿಸುತ್ತಿದ್ದಾರೆ ಎಂದರೆ ಸುಳ್ಳು ಎಂದು ಉತ್ತರಿಸುತ್ತಾರೆ.

ಪುನೀತ್ ಕೆ.ಟಿ.ರವರ ಬದುಕಿದ್ದಾಗ ಅವರು ಕುಟುಂಬದ ನಿರ್ವಹಣೆಗೆ ಯಾವುದೇ ರೀತಿ ನೆರವಾಗಿರಲಿಲ್ಲ ಎಂದರೆ ಸಾಕ್ಷಿ ನಮ್ಮ ಕುಟುಂಬಕ್ಕೆ ನೆರವಾಗಿದ್ದರು ಎಂದು ಉತ್ತರಿಸುತ್ತಾರೆ. ಕೆ.ಟಿ.ಪುನೀತ್ ವರಿಗೆ ಯವುದೇ ಸ್ವಂತ ಆದಾಯ ಇರಲಿಲ್ಲ ಎಂದರೆ ಸಾಕ್ಷಿ ಅವರು ಷುಗರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. ನನ್ನ ಮದುವೆಗೂ ಮುಂಚಿನಿಂದ ಕೆ.ಟಿ.ಪುನೀತ್ ರವರುಷುಗರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು, ಯಾವ ವರ್ಷದಿಂದ ಎಂದು ನನಗೆ ಗೊತ್ತಿಲ್ಲ, ಅವರ ಸಂಬಳದ ಬಗ್ಗೆಯೂ

ನನಗೆಗೊತ್ತಿಲ್ಲ. ನಾನು ಮದುವೆಯಾದ ನಂತರವೂ ಅವರು ಕೆಲಸಕ್ಕೆ ಹೋಗುತ್ತಿದ್ದರು. ನಮ್ಮ ಮದುವೆ ದಿನಾಂಕ 24.04.2014 ರಂದು ಆಗಿರುತ್ತದೆ. ನಿಮ್ಮ ಮದುವೆಯಾದ ಮೇಲೆ ಕೆ.ಟಿ.ಪುನೀತ್ ರವರು ಎಷ್ಟು ವರ್ಷ ಷುಗರ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋದರು ಎಂದರೆ ಸಾಕ್ಷಿ ಅಂದಾಜು 6 ರಿಂದ 7 ವರ್ಷ ಕೆಲಸಕ್ಕೆ ಹೋದರು ಎಂದು ಉತ್ತರಿಸುತ್ತಾರೆ. ಕೆ.ಟಿ.ಪುನೀತ್ ರವರು ಮದುವೆ ಪೂರ್ವದಲ್ಲಿ ಕೆಲಸದಿಂದ ಬಂದ ಸಂಬಳವನ್ನು ಕುಟುಂಬದ ನಿರ್ವಹಣೆಗಾಗಿ ಕೊಡುತ್ತಿರಲಿಲ್ಲ, ಅವರೇ ಸ್ವೇಚೆಯಿಂದ ಬಳಸುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಕುಟುಂಬಕ್ಕೆ ಕೊಡುತ್ತಿದುದಾಗಿ ಹೇಳತ್ತಿದ್ದರು ಎಂದು ಉತ್ತರಿಸುತ್ತಾರೆ. ಕೆ.ಟಿ.ಪುನೀತ್ ರವರು ಬದುಕಿದ್ದಾಗ ಕುಟುಂಬಕ್ಕೆ ಯಾವುದೇ ರೀತಿ ನೆರವಾಗಿಲ್ಲ, ಸಾಯುವಾಗ ಕುಟುಂಬಕ್ಕೆ ಹೊರೆಯಾಗಿ ತೀರಿಕೊಂಡರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಕೆ.ಟಿ.ಪುನೀತ್ ರವರು ತೀರಿಕೊಳ್ಳುವ ಮುನ್ನ ಅವರ ಅನಾರೋಗ್ಯದ ಚಿಕಿತ್ಸೆಗಾಗಿ ಮತ್ತು ಅವರನ್ನು ಉಳಿಸಿಕೊಳ್ಳುವ ಉದ್ದೇಶದಿಂದ ರೂ.40 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಾನು ಅವರನ್ನು ಮದುವೆಯಾದಾಗ ಕೆ.ಟಿ. ಪುನೀತ್ ರವರ ಆರೋರೇಗವಾಗಿ ಇದ್ದರು ಎಂದರೆ ಸರಿ. ದಿನನಿತ್ಯದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು ಮತ್ತು ಎಲ್ಲಾ ಚಟುವಟಿಕೆಗಳನ್ನು ಉತ್ಸುಕರಾಗಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಮದುವೆಯಾಗುವ ಕಾಲಕ್ಕೆ ಅವರಿಗೆ ಅನುವಂಶೀಯ ಖಾಯಿಲೆ ಇರಲಿಲ್ಲ ಎಂದರೆ ಸಾಕ್ಷಿ ಇರಲಿಲ್ಲ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.